# ಶ್ರೀಪತಿಯ ನಾಭಿಯಿಂದ ಅಜ ಜನಿಸಿದನು

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 05.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 04.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.

ಶ್ರೀಪತಿಯ ನಾಭಿಯಿಂದ ಅಜ ಜನಿಸಿದನು

ಅಜನ ಮಾನಸ ಪುತ್ರರೇ ಸನಕಾದ್ಯರು

ಸನಕಾದ್ಯರ ಶಿಷ್ಯರೇ ದೂರ್ವಾಸರು

ದೂರ್ವಾಸರ ಶಿಷ್ಯರೇ ಪರತೀರ್ಥರು

ಪರತೀರ್ಥರ ಶಿಷ್ಯರೇ ಸತ್ಯಪ್ರಜ್ಞರು

ಸತ್ಯಪ್ರಜ್ಞರ ಶಿಷ್ಯರೇ ಪ್ರಾಜ್ಞತೀರ್ಥರು

ಪ್ರಾಜ್ಞತೀರ್ಥರ ಶಿಷ್ಯರೇ ಅಚ್ಯುತಪ್ರೇಕ್ಷರು

ಅಚ್ಯುತಪ್ರೇಕ್ಷರ ಕರಸಂಜಾತರೇ ಪೂರ್ಣಪ್ರಜ್ಞರು

ಪೂರ್ಣಪ್ರಜ್ಞರೇ ನಮ್ಮ ಭಾಷ್ಯಕಾರರು

ಭಾಷ್ಯಕಾರರೇ ನಮ್ಮ ಗುರು ಮುಖ್ಯಪ್ರಾಣರು

ಗುರುಮುಖ್ಯಪ್ರಾಣಪತಿ ನಮ್ಮ ಪುರಂದರ ವಿಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಹಾಡಿನಲ್ಲಿ ದಾಸರು ಶ್ರೀಮದಾನಂದತೀರ್ಥರ ಪೀಠಸ್ಥ ಗುರು ಪರಂಪರೆಯನ್ನು ಹೇಳಿದ್ದಾರೆ.

ಶ್ರೀಮನ್ನಾರಾಯಣ

|

ಚತುರ್ಮುಖ ಬ್ರಹ್ಮ

|

ಸನಕಾದಿಗಳು (ಬ್ರಹ್ಮನ ಮಾನಸ ಪುತ್ರರು)

|

ದುರ್ವಾಸರು (ದುರ್ವಾಸರ ವರೆಗೆ ಭಾಗವತ ಸಂಪ್ರದಾಯದವರು ಇದೇ ಪೀಳಿಗೆ ಹಿಡಿಯುತ್ತಾರೆ)

|

ಪರತೀರ್ಥರು

|

ಸತ್ಯಪ್ರಜ್ಞರು

|

ಪ್ರಾಜ್ಞತೀರ್ಥರು

|

ಅಚ್ಯುತಪ್ರೇಕ್ಷರು

|

ಪೂರ್ಣಪ್ರಜ್ಞರು

**ಬ್ರಹ್ಮಾಂತಾ ಗುರುವಃ ಸಾಕ್ಷಾತ್ ಇಷ್ಟ ದೈವಂ ಶ್ರೀಯಃ ಪತಿ: ।**
**ಆಚಾರ್ಯ: ಶ್ರೀಮದಾಚಾರ್ಯಾ: ಸಂತುಮೇ ಜನ್ಮ ಜನ್ಮನಿ ॥**

ಎಂದು ಸಕಲ ಮಾಧ್ವರು ನಿತ್ಯವೂ ಈ ಗುರುಪರಂಪರೆಯನ್ನು ಸ್ಮರಿಸುವ ರೂಢಿಯಿದೆ.

ಮಧ್ವ ಪೀಠಗಳಲ್ಲಿ ಪರಂಪರೆಯನ್ನು ಹೇಳುವ ಸ್ಲೋಕಗಳಿವು:

ಶ್ರೀ ಹಂಸಂ ಪರಮಾತ್ಮಾನಮ್ ವಿರಿಂಚಿಮ್ ಸನಕಾದಿಕಾನ್ ।
ದುರ್ವಾಸಸೋ ಜ್ಞಾನ ನಿಧೀನ್ತ್ವೀಂದ್ರು ವಾಹನತೀರ್ಥಕಾನ್ ॥

ಕೈವಲ್ಯ ತೀರ್ಥಾನ್ ಜ್ಞಾನೇಶಾನ್ ಪರತೀರ್ಥಾನ್ನ ಮಾಮ್ಯಹಮ್ ।
ಸತ್ಯಪ್ರಜ್ಞಾನ್ ಪ್ರಾಜ್ಞತೀರ್ಥಾನ್ ಅನ್ಯಾನ್ ತದ್ವಮ್ ಶ ಜಾನಪಿ ॥

ಪುರೈವ ಕೃಷ್ಣಾ ಸಿದ್ಧಾನ್ನಭುಕ್ತ್ಯಾ ಶೋಧಿತ ಮಾನಸಂ ।
ಅಚ್ಯುತ ಪ್ರೇಕ್ಷ ತೀರ್ಥಂಚ ಮಧ್ವಾರ್ಯಾಣಾಮ್ ಗುರುಮ್ ಭಜೇ ॥

ಲಸತು ಶ್ರೀ ಮದಾನಂದತೀರ್ಥೇಂದುರ್ನೋ ಹೃದಂಬರೇ ।
ಯದ್ವಚಶ್ಚಂದ್ರಿಕಾ ಸ್ವಾಂತಸಂತಾಪಂ ವಿನಿಕೃಂತತಿ ॥

ಈ ಶ್ಲೋಕಗಳೇ ಮೇಲಿನ ಹಾಡಿಗೆ ಆಧಾರ.

**Classification:** Ugabhoga
**Ankita:** purandara vittala
**Location:** NA
**Category:** Pooja Tatva
**Sub-Category:** Muni, tirtha, sripati, brahma, huttu, sanaka, durvasa, purna, hanuma,
**Pravachana:** NA
**Explanation:** NA